# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎ.ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಜೇವರ್ಗಿ, ಇವರು ಕೃಷಿ ಪರಿಕರಗಳನ್ನು ಪಡೆಯದೇ ಸರ್ಕಾರದ ಸಹಾಯಧನವನ್ನು ಸಂಬಂಧಿತ ಸಂಸ್ಥೆಗಳಿಗೆ ಪಾವತಿಸಿರುವ ಬಗ್ಗೆ ಶಿಸ್ತು ಕ್ರಮ-ಅಂತಿಮ ಆದೇಶ.

ಓದಲಾಗಿದೆ:

1. ಆಯುಕ್ತರು, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ:ಸಿಬ್ಬಂದಿ-1/ವಿಚಾರಣೆ-5/4/2009-2010, ದಿನಾಂಕ:30-06-2011.
2. ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರಿಗೆ ಜಾರಿ ಮಾಡಲಾದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಕೃಇ 39 ಕೃಪವಿ 2011, ದಿನಾಂಕ:24-10-2011,
3. ಶ್ರೀ. ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರ ಲಿಖಿತ ಹೇಳಿಕೆ ದಿನಾಂಕ:15-11-2011,
4. ಸರ್ಕಾರದ ಆದೇಶ ಸಂಖ್ಯೆ: ಕೃಇ 39 ಕೃಪವಿ 2011, ದಿನಾಂಕ:10-08-2012,
5. ವಿಚಾರಣಾಧಿಕಾರಿಯವರ ವರದಿ ದಿನಾಂಕ: 06-12-2013,
6. ಶ್ರೀ.ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರಿಗೆ ಜಾರಿ ಮಾಡಲಾದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಕೃಇ 39 ಕೃಪವಿ 2011, ದಿನಾಂಕ:20-01-2014.
7. ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರು ಎರಡನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ:01-03-2014,
8. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರ ಪತ್ರ ಸಂಖ್ಯೆ:ಪಿಎಸ್‌ಸಿ 141, ಸಿಎನ್‌ಎಸ್, 14, ದಿನಾಂಕ:18-09-2014.

*********

ಪ್ರಸ್ತಾವನೆ:

ಶ್ರೀ. ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಇವರು ಹಿಂದೆ ಸಹಾಯಕ ಕೃಷಿ ನಿರ್ದೇಶಕರಾಗಿ ಕುಂದಾಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 2005-06 ಹಾಗೂ 2006-07 ನೇ ಸಾಲುಗಳಲ್ಲಿ ಇಲಾಖಾ ಕಾರ್ಯಕ್ರಮದನ್ವಯ 4 ಸಂಸ್ಥೆಗಳಿಂದ ಕೃಷಿ ಪರಿಕರಗಳನ್ನು ಪಡೆಯದೇ **ರೂ.2,12,393=00** ಗಳಷ್ಟು ಸರ್ಕಾರದ ಸಹಾಯಧನವನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಚೆಕ್ಕು/ಡಿಡಿಗಳನ್ನು ಸಂಬಂಧಿತ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದರೆನ್ನಲಾದ ಆರೋಪಗಳಿಗೆ ಸಂಬಂಧಿಸಿದಂತೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೃಷಿ ಆಯುಕ್ತರು. ಮೇಲೆ(1)ರಲ್ಲಿ ಓದಲಾದ ದಿನಾಂಕ:30-06-2011ರಲ್ಲಿ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದರು.

2. ಶ್ರೀ ಎ. ರಾಜಣ್ಣ, ಸ.ಕೃ.ನಿ. ಇವರಿಗೆ ದೋಷಾರೋಪಣಾ ಪಟ್ಟಿಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿ-ಮೇಲೆ (2)ರಲ್ಲಿ ಓದಲಾದ ದಿನಾಂಕ:24-10-2011ರ ಕಾರಣ ಕೇಳುವ ನೋಟೀಸ್ಸನ್ನು ಜಾರಿ ಮಾಡಲಾಗಿತ್ತು. ಈ ನೋಟೀಸ್‌ಗೆ ಆಪಾದಿತರು ಮೇಲೆ (3)ರಲ್ಲಿ ಓದಲಾದ ದಿನಾಂಕ:15-11-2011ರಂದು ನೀಡಿದ ಸಮಜಾಯಿಷಿಯಲ್ಲಿ ಅವರ ಮೇಲಿನ ಆರೋಪಗಳನ್ನು ತಳ್ಳಿಹಾಕಿರುತ್ತಾರೆ. ಆಪಾದಿತರು ನೀಡಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ, ಅವರ ಹೇಳಿಕೆಯನ್ನು ಪರಿಗಣಿಸುವಂತಹ ಅಂಶಗಳು/ದಾಖಲೆಗಳು ಇಲ್ಲವಾದ್ದರಿಂದ, ಈ ಪ್ರಕರಣದ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಸಲುವಾಗಿ ಮೇಲೆ (4) ರಲ್ಲಿ ಓದಲಾದ ದಿನಾಂಕ:10-08-2012ರ ಸರ್ಕಾರದ ಆದೇಶದಲ್ಲಿ ಶ್ರೀ.ಎಂ.ಜಿ.ಹಿರೇಮಠ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳಾಗಿ ಹಾಗೂ ಅಧೀಕ್ಷಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪುತ್ತೂರು, ಇವರನ್ನು ಮಂಡನಾಧಿಕಾರಿಗಳಾಗಿ ನೇಮಿಸಲಾಗಿತ್ತು.

3. ವಿಚಾರಣಾಧಿಕಾರಿಯುವರು ಸದರಿ ಪ್ರಕರಣದಲ್ಲಿ ಕೂಲಂಕಷವಾಗಿ ವಿಚಾರಣೆ ನಡೆಸಿ, ಮೇಲೆ(5)ರಲ್ಲಿ ಓದಲಾದ ಪತ್ರದೊಂದಿಗೆ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸುತ್ತಾ ಆಪಾದಿತರ ಮೇಲೆ ಮಾಡಲಾದ 2 ಆರೋಪಗಳು ರುಜುವಾತಾಗಿದೆ ಎಂದು ತಿಳಿಸಿರುತ್ತಾರೆ.

4. ಸದರಿ ವಿಚಾರಣಾ ವರದಿಯ ಪ್ರತಿಯನ್ನು ಶ್ರೀ. ಎ. ರಾಜಣ್ಣ, ಹಾಲಿ ಸಹಾಯಕ ಕೃಷಿ ನಿರ್ದೇಶಕರು, ಜೇವರ್ಗಿ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ ಇವರಿಗೆ ಮೇಲೆ(6)ರಲ್ಲಿ ಓದಲಾದ ದಿನಾಂಕ:20-01-2014ರ ಎರಡನೇ ಕಾರಣ ಕೇಳುವ ನೋಟೀಸ್‌ನೊಂದಿಗೆ ಜಾರಿ ಮಾಡಲಾಗಿತ್ತು. ಸದರಿ ನೋಟಿಸ್‌ಗೆ ಮೇಲೆ(7) ರಲ್ಲಿ ಓದಲಾದ ದಿನಾಂಕ:01-03-2014ರಲ್ಲಿ ಆಪಾದಿತರು ನೀಡಿದ ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಾ, ತಮ್ಮ ಮೇಲಿನ ಎರಡು ಆರೋಪಗಳನ್ನು ಪೂರ್ವಾಗ್ರಹ ಪೀಡಿತವೆಂದು, ತಮ್ಮ ಸೇವೆಯನ್ನು ದುರ್ಬಲಗೊಳಿಸಲು ಷಡ್ಯಂತ್ರವಾಗಿರುತ್ತದೆ ಎಂದು ಶ್ರೀ ನಾರಾಯಣ, ಸಹಾಯಕ ಕೃಷಿ ಅಧಿಕಾರಿ ಇವರ ವಿರುದ್ಧ ಪಾಟೀ ಸವಾಲು ಮಾಡಲು ಅವಕಾಶ ನೀಡದೇ, ಅಧಿಕಾರಿಯನ್ನು ದೂರವಿಡಲಾಗಿದೆ. ಕಾರಣ ವಿಚಾರಣೆ ಪರಿಪೂರ್ಣವಾಗಿ ನಡೆದಿರುವುದಿಲ್ಲ ಎಂದು ಭಾವಿಸಿರುತ್ತೇನೆಂದು ವಿವರಿಸಿ, ಸದರಿ ಆರೋಪಗಳಿಂದ ಮುಕ್ತನನ್ನಾಗಿಸಲು ಕೋರಿರುತ್ತಾರೆ.

5. ಆರೋಪಿತ ಅಧಿಕಾರಿಯವರ ಲಿಖಿತ ಹೇಳಿಕೆಗಳಲ್ಲಿನ ಅಂಶಗಳನ್ನು ವಿಚಾರಣಾ ವರದಿಯೊಂದಿಗೆ ಪರಿಶೀಲಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

<u>ಆರೋಪ:-1</u> **<u>ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಇವರು 2005-06 ಹಾಗೂ 2006-07 ನೇ ಸಾಲುಗಳಲ್ಲಿ ಇಲಾಖಾ ಕಾರ್ಯಕ್ರಮದನ್ವಯ 4 ಸಂಸ್ಥೆಗಳಿಂದ ಕೃಷಿ ಪರಿಕರಗಳನ್ನು ಪಡೆಯದೇ ರೂ.2,12,393=00 ಗಳಷ್ಟು ಸರ್ಕಾರದ ಸಹಾಯಧನವನ್ನು ಸಂಬಂಧಿತ ಸಂಸ್ಥೆಗಳಿಗೆ ಪಾವತಿಸಿ, ಸರ್ಕಾರಕ್ಕೆ ನಷ್ಟವುಂಟು ಮಾಡಿರುವುದು.</u>** ಎಂಬ ವಿಚಾರಕ್ಕೆ ಸಂಬಂಧಿಸಿದಂತೆ, ವಿಚಾರಣಾ ವರದಿಯಲ್ಲಿ, ಆಪಾದಿತರ ವಿರುದ್ಧ ಮಾಡಿರುವ ಸದರಿ ಆರೋಪವನ್ನು ಸಾಬೀತು ಪಡಿಸಲು 5 ಜನ

ಸಾಕ್ಷಿದಾರರನ್ನು ( PW-1 ರಿಂದ PW-05) ಗುರುತಿಸಿ, ಅವರುಗಳಿಂದ ಹೇಳಿಕೆಗಳನ್ನು ಪಡೆದು, ಸದರಿ ಸಂಸ್ಥೆಗಳಿಗೆ ಪಾವತಿಸಿರುವ ಡಿ.ಸಿ.ಬಿಲ್ಲುಗಳ ವಿವರಗಳನ್ನು ದಾಖಲೆಗಳೊಂದಿಗೆ ಅವುಗಳನ್ನು ಪಿ-1 ರಿಂದ ಪಿ-24 ಗಳೆಂದು ಗುರುತಿಸಿಕೊಂಡಿರುತ್ತಾರೆ. ಆರೋಪಿತ ಅಧಿಕಾರಿಯವರು ಮೊದಲನೇ ಆರೋಪಗಳ ವಿಚಾರಣೆ ಸಂದರ್ಭದಲ್ಲಿ ಗೈರು ಹಾಜರಾಗಿದ್ದ ಕಾರಣ, ಸಾಕ್ಷಿದಾರರಿಗೆ ಪಾಟಿ ಸವಾಲು ಮಾಡಿರುವುದಿಲ್ಲ. ತದನಂತರ, ಆರೋಪ-1 ಕ್ಕೆ ಸಂಬಂಧಿಸಿದಂತೆ ದಿನಾಂಕ:21-09-2013 ರಂದು ತಮ್ಮ ಸ್ವಯಂ ಹೇಳಿಕೆಯನ್ನು ನೀಡಿ, ತಮ್ಮ ಪರವಾಗಿ ನಿಶಾನೆ ಡಿ-1 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.(ಮೊದಲನೇ ಕಾರಣ ಕೇಳುವ ನೋಟೀಸ್‌ಗೆ ನೀಡಿದ ಪ್ರತಿರಕ್ಷಣಾ ಹೇಳಿಕೆಯನ್ನೇ ತಮ್ಮ ರಕ್ಷಣಾ ಹೇಳಿಕೆ ಎಂದು ವಿವರಿಸಿರುತ್ತಾರೆ.). ಸದರಿಯವರು ಸಾಕ್ಷಿದಾರರಿಗೆ ಪಾಟಿ ಸವಾಲು ಮಾಡಲು ಅವಕಾಶವನ್ನು ಕೇಳಿರುವುದಿಲ್ಲ. ಸದರಿ ಆರೋಪಿತ ಅಧಿಕಾರಿಯವರು, ಸಾಕ್ಷಿದಾರರಾದ ಶ್ರೀ ಎನ್.ರಾಮದಾಸ ರೈ ರವರ ಸಾಕ್ಷಿಗಳನ್ನು ನಿರಾಕರಿಸಲಾರದ ಕಾರಣ ಆಪಾದಿತರು ಅವರ ಸಾಕ್ಷಿಯನ್ನು ಒಪ್ಪಿಕೊಂಡಂತಾಗುತ್ತದೆ. ಸದರಿಯವರ ಮೌಖಿಕ ಸಾಕ್ಷಿಯು ನಿಶಾನೆ ಪಿ-4 ರಿಂದ ಪಿ-21 ದಾಖಲೆಗಳಿಂದ ಪುಷ್ಟೀಕರಿಸುತ್ತದೆ. ಆದ್ದರಿಂದ, ಅವರ ಸಾಕ್ಷಿಯು ನಂಬಲು ಯೋಗ್ಯವಾಗಿದೆ. ಅಲ್ಲದೇ, 2ನೇ ಸಾಕ್ಷಿದಾರರಾದ ಶ್ರೀ ನಾರಾಯಣ, ಸಹಾಯಕ ಕೃಷಿ ಅಧಿಕಾರಿ ಇವರ ಸಾಕ್ಷಿಯಲ್ಲಿ, ಮೆ:ಕರ್ನಾಟಕ ಬಯೋ ಫರ್ಟಿಲೈಸರ್ಸ್, ವಿಜಾಪುರ ಸಂಸ್ಥೆಯಿಂದ ಖರೀದಿಸಿದ 49.100 ಟನ್ ಜಿಪ್ಸಂ ದಾಸ್ತಾನು ಬಂದಿರುವುದಿಲ್ಲ. ಆದರೆ, ಸರ್ಕಾರದ ಸಹಾಯಧನವನ್ನು ಸಂಸ್ಥೆಗೆ ಆಪಾದಿತರೇ ತಮ್ಮನ್ನು ವಿಚಾರಿಸದೇ ಪಾವತಿಸಿರುತ್ತಾರೆ, ಸಹಾಯಧನಕ್ಕನುಗುಣವಾಗಿ ಕೃಷಿ ಪರಿಕರಗಳು ಸರಬರಾಜಾಗದಿರುವ ವಿಷಯದ ಕುರಿತು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆಪಾದಿತರು ಪಾಟೀ ಸವಾಲು ಮಾಡಿ ನಿರಾಕರಿಸಿರುವುದಿಲ್ಲ.

3ನೇ ಸಾಕ್ಷಿದಾರರಾದ ಶ್ರೀ ವಿಶ್ವನಾಥ್ ಶೆಟ್ಟಿ, ಸಹಾಯಕ ಕೃಷಿ ಅಧಿಕಾರಿ ಇವರು 2006-07 ನೇ ಸಾಲಿನ ಸಹಾಯಧನದಲ್ಲಿ ರೈತರಿಗೆ ವಿತರಿಸಲು ಮೆ:ಪಾಲಿ ಆರ್ಗನಿಕ್, ನಿಪ್ಪಾಣಿ ಇವರಿಂದ ಗೊಬ್ಬರವಾಗಲಿ, ಮೆ:ಹಾಜಿರಾ ಆಯಿಲ್ ಇಂಡಸ್ಟ್ರೀಸ್, ಚಳ್ಳಕೆರೆ ಇವರಿಂದ ಬೇವಿನ ಹಿಂಡಿಯಾಗಲಿ ರೈತ ಸಂಪರ್ಕ ಕೇಂದ್ರಕ್ಕೆ ಬಂದಿರುವುದಿಲ್ಲವೆಂದು, ನಿಶಾನೆ ಪಿ-16 ರ ಪತ್ರವನ್ನು ಸಹಾಯಕ ಕೃಷಿ ನಿರ್ದೇಶಕರಿಗೆ ಮೆ:ಕರ್ನಾಟಕ ಬಯೋ ಫರ್ಟಿಲೈಜರ್ಸ್, ವಿಜಾಪೂರ ಇವರಿಂದ ಜಿಪ್ಸಂ ಬಂದಿಲ್ಲವೆಂದು ಪತ್ರ ಬರೆದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯನ್ನು ಸಹ ಆಪಾದಿತರು ನಿರಾಕರಿಸಿರುವುದಿಲ್ಲ.

4ನೇ ಸಾಕ್ಷಿದಾರರಾದ ಶ್ರೀ ಸುಧಾಕರ ಶೆಟ್ಟಿ, ಸಹಾಯಕ ಕೃಷಿ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ 2006-07 ನೇ ಸಾಲಿನಲ್ಲಿ ಮೆ: ಪಾಲಿ ಆಗ್ರ್ಯಾನಿಕ್, ನಿಪ್ಪಾಣಿ ಇವರಿಂದ ಸಂಪದ್ಭರಿತ ಕಾಂಪೋಸ್ಟ್, ಮೆ: ಹಾಜಿರಾ ಆಯಿಲ್ ಇಂಡಸ್ಟ್ರೀಸ್, ಚಳ್ಳಕೆರೆ ಇವರಿಂದ

ಬೇವಿನ ಹಿಂಡಿಯಾಗಲಿ ಮತ್ತು ಎನ್‌ರಿಚಡ್ ಆರ್ಗ್ಯಾನಿಕ್ ಮೆನ್ಯೂರ್ ಕಿಸಾನ್ ಗೋಲ್ಡ್ ಗೊಬ್ಬರ ಬಂದಿಲ್ಲವೆಂದು ಸಾಕ್ಷಿ ನುಡಿದಿದ್ದು, ಅವರ ಸಾಕ್ಷಿಯನ್ನು ಸಹ ಆಪಾದಿತರು ಅಲ್ಲಗಳೆದಿರುವುದಿಲ್ಲ.

ಕೊನೆಯದಾಗಿ, 5ನೇ ಸಾಕ್ಷಿದಾರರಾದ ಶ್ರೀ ಆನಂದ ಬಾಗಲಕೋಟೆ, ಹಿಂದಿನ ದ್ವಿ.ದ.ಸ. ಉಡುಪಿ ಇವರು ತಮ್ಮ ಹೇಳಿಕೆಯಲ್ಲಿ ಆರೋಪಿತರು ನಗದು ವಹಿಯನ್ನು ಪ್ರತಿದಿನ ನಿರ್ವಹಿಸುವಂತೆ ಒತ್ತಡವೇರುತ್ತಿದ್ದ ವಿಷಯವನ್ನು ವಿವರಿಸಿ, ಪಾವತಿಸಿರುವ ಸಹಾಯಧನಕ್ಕನುಗುಣವಾಗಿ ಕೃಷಿ ಪರಿಕರಗಳು ಸರಬರಾಜಾಗದಿರುವ ವಿಷಯ ಕುರಿತು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿ ಹೇಳಿಕೆಯನ್ನು ಆಪಾದಿತರು ನಿರಾಕರಿಸಿರುವುದಿಲ್ಲ. ಕೃಷಿ ಪರಿಕರಗಳನ್ನು ತರಿಸುವ ಪೂರ್ಣ ಜವಾಬ್ದಾರಿಯು ಜಂಟಿ ಕೃಷಿ ನಿರ್ದೇಶಕರು, ಉಡುಪಿ ಇವರದ್ದಾಗಿರುತ್ತದೆ ಎಂದು ನುಡಿದಿದ್ದು, ಈ ಸಾಕ್ಷಿಯನ್ನು ನಂಬಲು ಸಾಧ್ಯವಿಲ್ಲವೆಂದು ವಿವರಿಸಿ, PW-1 ರಿಂದ PW-05 ಸಾಕ್ಷಿದಾರರ ಮೌಖಿಕ ಸಾಕ್ಷಿಯಿಂದ ಹಾಗೂ ನಿಶಾನೆ ಪಿ-4 ರಿಂದ 23ರ ದಾಖಲೆಗಳ ಆಧಾರದ ಮೇಲೆ 1ನೇ ಆರೋಪವು ಸಾಬೀತಾಗಿರುತ್ತದೆ ಎಂದು ನಿರ್ಧರಿಸಿ, ನಿರ್ಣಯಿಸಿರುತ್ತಾರೆ. ಆಪಾದಿತ ಅಧಿಕಾರಿಯವರು ತಮ್ಮ ಮೊದಲನೇ ಪ್ರತಿರಕ್ಷಣಾ ಹೇಳಿಕೆಯನ್ನೇ ಪುನರುಚ್ಚರಿಸಿ, ಕೃಷಿ ಪರಿಕರಗಳನ್ನು ತರಿಸಿಕೊಳ್ಳುವ ವಿಚಾರದಲ್ಲಿ, ಜಂಟಿ ಕೃಷಿ ನಿರ್ದೇಶಕರು, ಉಡುಪಿ ಇವರ ಮಾರ್ಗದರ್ಶನದಂತೆ ಕ್ರಮವಹಿಸಿದ್ದು, ಅವರೇ ಕೃಷಿ ಪರಿಕರಗಳನ್ನು ತರಿಸಿಕೊಳ್ಳುವ ಜವಾಬ್ದಾರರಾಗುತ್ತಾರೆಂದು ತಿಳಿಸಿರುತ್ತಾರೆ.

ಆರೋಪ-2: ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಇವರು ಸದರಿ ಹುದ್ದೆಯಿಂದ ಬಿಡುಗಡೆ ಹೊಂದುವಾಗ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಚೆಕ್ಕು/ಡಿಡಿಗಳನ್ನು ಹಸ್ತಾಂತರಿಸಿರುವುದು. ಡಿ.ಡಿ.ಸಂಖ್ಯೆ:012375, 014584 ಹಾಗೂ 014585 ಗಳನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಹಿಂದೆಯೇ ಪಾವತಿಸಿ, ನಗದೀಕರಿಸಿಕೊಂಡಿದ್ದರೂ ಸಹ, ಶ್ರೀ ಎನ್.ರಾಮದಾಸ್ ರೈ ಇವರಿಗೆ ಪ್ರಭಾರವನ್ನು ಹಸ್ತಾಂತರಿಸುವಾಗ ಸದರಿ ಖಜಾನೆ ಚೆಕ್‌ಗಳನ್ನು ಸೇರಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ, 1ನೇ ಸಾಕ್ಷಿದಾರರಾದ ಶ್ರೀ ಎನ್.ರಾಮದಾಸ ರೈ ರವರು ನೀಡಿದ ಸಾಕ್ಷಿಯನ್ನು ಆಪಾದಿತರು ನಿರಾಕರಿಸಿರುವುದಿಲ್ಲ ಹಾಗೂ, ಆಪಾದಿತರು ತಮ್ಮ ಸ್ವಯಂ ಸಾಕ್ಷಿ ನೀಡುವಾಗ, ಅವರ ಪಾಟೀ ಸವಾಲಿನಲ್ಲಿ ನಿಶಾನೆ ಪಿ-2 ಸ್ವೀಕೃತಿಗೆ (ಸಿ.ಟಿ.ಸಿ) ಸಹಿ ಮಾಡುವಾಗ ಅವರು 3 ಡಿಡಿ ಮತ್ತು ಚೆಕ್‌ಗಳನ್ನು ಹಸ್ತಾಂತರಿಸಿರುವುದಿಲ್ಲವೆಂದು ಸಾಕ್ಷಿ ನುಡಿದಿದ್ದು, ಆದರೆ, ನಿಶಾನೆ ಪಿ-2 ಸ್ವೀಕೃತಿ ಅವರ ಸಾಕ್ಷಿಗೆ ವಿರುದ್ಧವಾಗಿದೆ. ಆದ್ದರಿಂದ ಅವರ ಸಾಕ್ಷಿ ನಂಬುವುದು ಸಾಧ್ಯವಿಲ್ಲ. ಶ್ರೀ ಎನ್.ರಾಮದಾಸ ರೈರವರ ಮೌಖಿಕ ಸಾಕ್ಷಿ ಹಾಗೂ ನಿಶಾನೆ ಪಿ-2 ಸ್ವೀಕೃತಿ ಮತ್ತು ನಿಶಾನೆ ಪಿ-3 SBI ನಿಪ್ಪಾಣಿ ಶಾಖೆ ಮ್ಯಾನೇಜರ್ ಇವರು ನೀಡಿರುವ ಪತ್ರದ ಆಧಾರದ ಮೇಲೆ ಹಾಗೂ ಮಂಡನಾಧಿಕಾರಿಗಳು ಸಲ್ಲಿಸಿದ ಲಿಖಿತವಾದ ನಂಬಲು ಯೋಗ್ಯವಾಗಿರುವುದರಿಂದ ಇವರ 2 ನೇ ಆರೋಪವು ಸಾಬೀತಾಗಿದೆ ಎಂದು ನಿರ್ಧರಿಸಿ, ನಿರ್ಣಯಿಸಿರುತ್ತಾರೆ.

6. ವಿಚಾರಣಾಧಿಕಾರಿಯವರು ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ವಿಚಾರಣೆ ನಡೆಸಿದ ನಂತರ ಆಪಾದಿತ ಅಧಿಕಾರಿಯವರು ನೀಡಿದ ರಕ್ಷಣಾ ಹೇಳಿಕೆ ಹಾಗೂ ಅವರ ಲಿಖಿತವಾದ, ಮೌಖಿಕ ಮತ್ತು ಲಿಖಿತ ಸಾಕ್ಷ್ಯಾಧಾರಗಳ ಜೊತೆ ವಿಮರ್ಶಿಸಿ, ವಿಚಾರಣಾ ವರದಿಯಲ್ಲಿ ದಾಖಲಿಸಿ, ಈ ಪ್ರಕರಣದಲ್ಲಿ ಸದರಿ ಅಧಿಕಾರಿಯವರ ವಿರುದ್ಧದ ಆರೋಪಗಳು ರುಜುವಾತಾಗಿರುತ್ತವೆಂದು ನಿರ್ಣಯಿಸಿರುವುದು ಸಮರ್ಪಕವಾಗಿರುತ್ತದೆ. ಮೇಲಿನ ವಿವರಗಳನ್ನು ಪರಿಶೀಲಿಸಿದಾಗ ಆಪಾದಿತ ಅಧಿಕಾರಿಯವರು 2ನೇ ಕಾರಣ ಕೇಳುವ ನೋಟಿಸ್‌ನಲ್ಲಿ ಆಪಾದಿಸಿರುವಂತೆ ಅವರಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಿಲ್ಲವೆಂಬ ಹೇಳಿಕೆಯು ನಿರಾಧಾರವಾಗಿರುತ್ತದೆ. ಹಾಗೂ ಅವರ ಮೇಲಿನ ಆರೋಪಗಳು ಪೂರ್ವಾಗ್ರಹ ಪೀಡಿತವಾಗಿರುವುದಿಲ್ಲವೆಂದು ಕಂಡುಬರುತ್ತದೆ.

7. ಈ ಹಿನ್ನಲೆಯಲ್ಲಿ ವಿಚಾರಣಾದಿಕಾರಿಗಳು ಆರೋಪದ ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಅಂಗೀಕರಿಸಲು ಸರ್ಕಾರವು ತೀರ್ಮಾನಿಸಿ, ಶ್ರೀ ಎ. ರಾಜಣ್ಣ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಕುಂದಾಪುರ, ಇವರಿಂದ ಸರ್ಕಾರಕ್ಕೆ ನಷ್ಟವಾಗಿರುವ ಹಣ **ರೂ.2,12,393=00**ಗಳನ್ನು ಕರ್ನಾಟಕ ನಾಗರಿಕ ಸೇವಾ(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 8(iv)ರಡಿಯಲ್ಲಿ ವಸೂಲು ಮಾಡಲು, ಹಾಗೂ ಇವರನ್ನು ಕರ್ನಾಟಕ ನಾಗರಿಕ ಸೇವಾ(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 8(vi)ರಡಿಯಲ್ಲಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿರುತ್ತದೆ. ಸರ್ಕಾರದ ಈ ತೀರ್ಮಾನಕ್ಕೆ ಕ್ರಮಾಂಕ(8)ರಲ್ಲಿ ಓದಲಾದ ದಿನಾಂಕ:18-09-2014ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ತನ್ನ ಸಹಮತಿಯನ್ನು ನೀಡಿರುತ್ತದೆ. ಆದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 39 ಕೃಪವಿ 2011,**
**ಬೆಂಗಳೂರು, ದಿನಾಂಕ:23/10/2014**

8. ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಜೇವರ್ಗಿ, ಇವರು ಈ ಹಿಂದೆ ಸಹಾಯಕ ಕೃಷಿ ನಿರ್ದೇಶಕರು ಕುಂದಾಪುರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 2005-06 ಹಾಗೂ 2006-07 ನೇ ಸಾಲುಗಳಲ್ಲಿ ಇಲಾಖಾ ಕಾರ್ಯಕ್ರಮದನ್ವಯ 4 ಸಂಸ್ಥೆಗಳಿಂದ ಕೃಷಿ ಪರಿಕರಗಳನ್ನು ಪಡೆಯದೇ ಸರ್ಕಾರದ ಸಹಾಯಧನವನ್ನು ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಚೆಕ್ಕು/ಡಿಡಿಗಳನ್ನು ಸಂಬಂಧಿತ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದರೆನ್ನಲಾದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರಿಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iv)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇವರಿಂದ ಸರ್ಕಾರಕ್ಕೆ ನಷ್ಟವಾಗಿರುವ ಹಣ **ರೂ.2,12,393=00 (ಎರಡು ಲಕ್ಷದ ಹನ್ನೆರೆಡು ಸಾವಿರದ ಮೂರ ನೂರ ತೊಂಬತ್ತೂರು ರೂಪಾಯಿಗಳು ಮಾತ್ರ)ಗಳನ್ನು** ವಸೂಲಿ ಮಾಡಲು ಹಾಗೂ ಕರ್ನಾಟಕ ನಾಗರಿಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(vi)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ

ನಿರ್ದೇಶಕರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ,
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು,(ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು. (ಪ್ರತ್ಯೇಕ ಪತ್ರದೊಂದಿಗೆ)
4. ಜಂಟಿ ಕೃಷಿ-ನಿರ್ದೇಶಕರು ಗುಲ್ಬರ್ಗಾ ಮತ್ತು ಉಡುಪಿ,
5. ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಜೇವರ್ಗಿ,(ನೊಂದಣಿ ಅಂಚೆ ಮುಖಾಂತರ ಹಾಗೂ ಕೃಷಿ ಆಯುಕ್ತರ ಮುಖಾಂತರ)
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ) (ವಿಷಯ ಸಂಖ್ಯೆ:ಸಿ:544/2014) ವಿಧಾನ ಸೌಧ, ಬೆಂಗಳೂರು.
7. ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
9. ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ,
10. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.